**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 5844 / 2023**

**ಡಿ.ಡಬ್ಲ್ಯೂ -01**

| | |
|---|---|
| ಹೆಸರು | **ಶಶಿಧರ** |
| ತಂದೆ ಹೆಸರು | **ವೇಣುಗೋಪಾಲ** |
| ವಯಸ್ಸು | **37** |
| ಉದ್ಯೋಗ | **ಬಟ್ಟೆ ವ್ಯಾಪಾರಿ** |
| ವಿಳಾಸ | **ಟಿ.ಆರ್. ಲೇಔಟ್, ಮಾಗಡಿ.** |

**ದಿನಾಂಕಃ 04-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಶ್ರೀ. **ಜಿ.ಹೆಚ್.ಎಂ.** ವಕೀಲರಿಂದ **ಆರೋಪಿ** ಪರವಾಗಿ :-

ಪಿರ್ಯಾದುದಾರರು ನನ್ನ ತಂದೆಯ ಸ್ನೇಹಿತರು. ಪಿರ್ಯಾದುದಾರರು ನನ್ನ ತಂದೆಯವರೊಂದಿಗೆ ವ್ಯವಹಾರ ಮಾಡಿದ್ದರು ಹಾಗೂ ಪಿರ್ಯಾದುದಾರರ ಮತ್ತು ನನ್ನ ತಂದೆಯವರ ನಡುವೆ ಏನು ವ್ಯವಹಾರ ಆಗಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ನಾನು ಪಿರ್ಯಾದುದಾರರಿಂದ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ ಹಾಗೂ ನಾನು ಪಿರ್ಯಾದುದಾರರಿಗೆ ಯಾವುದೇ ಹಣ ಕೊಡಬೇಕಾಗಿರುವುದಿಲ್ಲ. ನನ್ನ ತಂದೆ ಮತ್ತು ಪಿರ್ಯಾದುದಾರರು ಏನು ವ್ಯವಹಾರ ಮಾಡುತ್ತಿದ್ದ್ಮರೋ ಹಾಗೂ ಭದ್ರತೆಗಾಗಿ ಚೆಕ್ ಕೊಟ್ಟಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯವರು ಮಾರ್ಚ್ - 2023 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಯವರು ಮರಣ ಹೊಂದುವ 2-3 ತಿಂಗಳ ಮುಂಚೆ ನನಗೆ ಹೇಳಿದ್ದರು ನಾನು ಯಾರಿಗೂ ಯಾವುದೇ ಹಣ ಕೊಡುವುದು ಇರುವುದಿಲ್ಲ ಹಾಗೂ ಎಲ್ಲಾ ವ್ಯವಹಾರ ಮುಗಿದಿರುತ್ತದೆ ಹಾಗೂ ಭದ್ರತೆಗಾಗಿ ಚೆಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ಹೇಳಿದ್ದರು. ನಾನು ಯಾವುದೇ ವ್ಯವಹಾರವನ್ನು ಹೊರಗಡೆ ಮಾಡುತ್ತಿದ್ದಿರಲಿಲ್ಲ ಹಾಗೂ ನನಗೆ ಆ ಶಕ್ತಿ ಇರುವುದಿಲ್ಲ ನಾನು ಬಟ್ಟೆ ಅಂಗಡಿ ವ್ಯವಹಾರವನ್ನು ಮಾತ್ರ ಮಾಡುತ್ತಿದ್ದೇನು. ಪಿರ್ಯಾದುದಾರರು ನನ್ನ ಖಾತೆಗೆ ಯಾವುದೇ ಹಣವನ್ನು ಹಾಕಿರುವುದಿಲ್ಲ ಅದಕ್ಕೆ ಬೇಕಾದ ಸಾಕ್ಷ್ಯದಾರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಈ ದೂರಿನಲ್ಲಿ ನನಗೆ ಕಾನೂನು ತಿಳುವಳಿಕೆ ಬಂದ ಬಗ್ಗೆ ಸಹ ನನ್ನ ಗಮನಕ್ಕೆ ಬಂದಿರುವುದಿಲ್ಲ. ಕೋರ್ಟ್ ಪೋಲಿಸರು ನನಗೆ ಪೋನ್ ಮಾಡಿದಾಗ ನಾನು ವಕೀಲರನ್ನು ನೇಮಕ ಮಾಡಿಕೊಳ್ಳುತ್ತೇನೆ. ಆಗ ವಕೀಲರು ನನಗೆ ನಿಮ್ಮ ವಿರುದ್ದ ಈ ರೀತಿ ಕೇಸ್ ಆಗಿದೆ ಎಂದು ತಿಳಿಸಿರುತ್ತಾರೆ. ಪಿರ್ಯಾದುದಾರರು ಮತ್ತು ಅವರ ಮಕ್ಕಳು ಸೇರಿ ನನ್ನ ವಿರುದ್ದ ಒಟ್ಟು 5 ಪ್ರಕರಣಗಳನ್ನು ದಾಖಲಿಸಿರುತ್ತಾರೆ. ನಾನು ಪಿರ್ಯಾದುದಾರರಿಗೆ ಯಾವುದೇ ಹಣವನ್ನು ಕೊಡಬೇಕಾಗಿರುವುದಿಲ್ಲ ಆದ್ದರಿಂದ ನನಗೆ ನ್ಯಾಯ ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಈ ಹಂತದಲ್ಲಿ  ಆರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.